ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ವಕೀಲರಿಂದಃ-

ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ನಿಪಿ-1 ಎಂದು, ದೂರಿನ ದೃಢೀಕೃತ ನಕಲನ್ನು ನಿಪಿ-2 ಎಂದು, ದೋಷಾರೋಪಣಾ ಪಟ್ಟಿಯ ದೃಢೀಕೃತ ನಕಲನ್ನು ನಿಪಿ-3 ಎಂದು, ಸ್ಥಳ ಪಂಚನಾಮೆಯ ದೃಢೀಕೃತ ನಕಲನ್ನು ನಿಪಿ-4 ಎಂದು, ಐಎಂವಿ ವರದಿಯ ದೃಢೀಕೃತ ನಕಲನ್ನು ನಿಪಿ-5 ಎಂದು, 2 ಟಾಕ್ಸ್ ಇನ್‌ವಾಯ್ಸ್ ಅನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ-6 ಮತ್ತು ನಿಪಿ-7 ಎಂದು, 3 ಬಿಲ್ಲುಗಳನ್ನು ಹಾಜರು ಮಾಡಿದ್ದು ಅವುಗಳನ್ನು ಕ್ರಮವಾಗಿ ನಿಪಿ-8 ರಿಂದ ನಿಪಿ-10 ಎಂದು, ವಾಹನ ನೋಂದಣಿ ಸಂಖ್ಯೆಃ ಕೆಎ-42-ಎ-1830 ವಾಹನದ ಆರ್ ಸಿ ನೋಟರೀಕೃತ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ಅಸಲು ಪ್ರತಿಯೊಂದಿಗೆ ತಾಳೆ ಮಾಡಿ ನೋಡಿ ಅದನ್ನು ನಿಪಿ-11 ಎಂದು, ಅರ್ಜಿದಾರರ ಚಾಲನಾ ಪರವಾನಗಿಯ ನೋಟರೀಕೃತ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ಅಸಲು ಪ್ರತಿಯೊಂದಿಗೆ ತಾಳೆ ಮಾಡಿ ನೋಡಿ ಅದನ್ನು ನಿಪಿ-12 ಎಂದು, ವಾಹನದ 4 ಭಾವ ಚಿತ್ರಗಳನ್ನು ಹಾಜರು ಮಾಡಿದ್ದು ಅವುಗಳನ್ನು ಒಟ್ಟಾಗಿ ನಿಪಿ-13 ಎಂದು, ಅವುಗಳಿಗೆ ಸಂಬಂಧಪಟ್ಟ ಸಿ ಡಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ವಕೀಲರಿಂದಃ

ಹಾಜರಿದ್ದು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ ಬಿ.ಟಿ)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು